ಜೀವನದ ಹೋರಾಟಕ್ಕೆ ಸಜ್ಜುಗೊಳಿಸದ, ಶಕ್ತಿವಂತನನ್ನಾಗಿ ಮಾಡದ ಶಿಕ್ಷಣ, ಶಿಕ್ಷಣವೇ? ವರ್ತಮಾನ ಮತ್ತು ಭವಿಷ್ಯತ್ತುಗಳಿಗೂ ಆಗುವ ವಿಶಿಷ್ಟ ಯೋಜನೆಯಾಗಿ ಶಿಕ್ಷಣದ ಪ್ರಕ್ರಿಯೆ ವ್ಯಕ್ತಿಗೆ ಆಸರೆಯನ್ನೀಯಬೇಕಲ್ಲವೇ? ಅಧ್ಯಯನದ ವಿಷಯಗಳಲ್ಲಿರುವ ಮುಖ್ಯ ಪರಿಕಲ್ಪನೆಗಳು ಸರಿಯಾಗಿ ಗ್ರಹಿಕೆಯಾಗಿರಬೇಕು ಮತ್ತು ದೊರೆಯುವ ಜ್ಞಾನ ಸಮಕಾಲೀನ ಜ್ಞಾನಸ್ಫೋಟಕ್ಕೆ ಅನುಗುಣವಾಗಿರಬೇಕಲ್ಲವೇ? ಮಾಹಿತಿಸಂಗ್ರಹವೇ ಶಿಕ್ಷಣವೆಂದಾದರೆ ಗ್ರಂಥಾಲಯಗಳು ಮತ್ತು ವಿಶ್ವಕೋಶಗಳೇ ಋಷಿಗಳಾಗುತ್ತಿದ್ದವು.

ಈಗಂತೂ ಎಲ್ಲ ಕ್ಷೇತ್ರಗಳಲ್ಲಿಯೂ ವಿಶ್ವವ್ಯಾಪಿಯಾಗಿ ಸಂಶೋಧನೆಗಳು ನಡೆದು, ದಿನದಿನವೂ ಹೊಸ ವಿಷಯಗಳು ಹೊರಬರುತ್ತಿವೆ. ಕಂಪ್ಯೂಟರ್, ಅಂತರ್ಜಾಲ ಮುಂತಾದವುಗಳಿಂದ ವಿಶ್ವದ ಎಲ್ಲಾ ಕಡೆಯ ಸಂಪರ್ಕ ಅತಿ ಸುಲಭವಾಗಿ, ನಾವೆಲ್ಲಾ ವಿಶ್ವವೆಂಬ ಒಂದು ಹಳ್ಳಿಯಲ್ಲಿ ಈಗ ವಾಸಿಸುತ್ತಿದ್ದೇವೆ. ವಿಶ್ವದ ಪುಸ್ತಕ ಭಂಡಾರದಲ್ಲಿರುವುದನ್ನು ಕ್ಷಣದಲ್ಲಿ ನಮ್ಮ ಮೇಜಿನ ಮೇಲೆ ತರಬಹುದು. ಹೀಗಿರುವಾಗ ಈ ಆಧುನಿಕ ಸಾಧನಗಳ ಜೊತೆಗೆ, ಹಳೆಯ ವಿಧಾನಗಳನ್ನೂ ಸಮೀಕರಿಸಿಕೊಂಡು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಬೇಕು. ವಿದ್ಯಾಭ್ಯಾಸ ಅಂದರೆ ಕೇವಲ ಓದುವುದಲ್ಲ.

**ಯಃ ಪಠತಿ ಲಿಖತಿ ಪಶ್ಯತಿ ಪರಿಪೃಚ್ಛತಿ ಪಂಡಿತಾನುಪಾಶ್ರಯತಿ ।**
**ತಸ್ಯ ದಿವಾಕರಕಿರಣೈರ್ನಲಿನೀದಲಮಿವ ವಿಕಾಸ್ಯತೇ ಬುದ್ಧಿಃ ॥**

ಮೇಲಿನ ಸಂಸ್ಕೃತ ಉಕ್ತಿಯಲ್ಲಿ ಹೇಳಿರುವಂತೆ ಯಾರು ಓದುತ್ತಾರೋ, ಬರೆಯುತ್ತಾರೋ, ಪ್ರಕೃತಿಯನ್ನು ವೀಕ್ಷಿಸುತ್ತಾರೋ, ಮತ್ತೆ ಮತ್ತೆ ಪ್ರಶ್ನಿಸುತ್ತಾರೋ, ತಿಳಿದವರೊಡನೆ ಚರ್ಚಿಸುತ್ತಾರೋ ಅಂಥವರ ಬುದ್ಧಿಯು ಸೂರ್ಯಕಿರಣದಿಂದ ಕಮಲ ಪುಷ್ಪದ ದಳಗಳು ಅರಳುವಂತೆ ವಿಕಾಸ ಹೊಂದುತ್ತದಂತೆ! ಹೀಗೆ ಈ ಶ್ಲೋಕ ನೈಜ ಶಿಕ್ಷಣದ ಸ್ವರೂಪವನ್ನು ಸಮಗ್ರವಾಗಿ ಧ್ವನಿಸುತ್ತದೆ.

ಉಪಾಧ್ಯಾಯರು ಸಕಲವನ್ನೂ ತಿಳಿಸಿ ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿ ಮಾಡುವುದು ಸಾಧ್ಯವಿಲ್ಲ. ಶ್ಲೋಕವೊಂದು ಇದನ್ನು ಹೀಗೆ ಹೇಳುತ್ತದೆ:

**ಆಚಾರ್ಯಾತ್ ಪಾದಮಾಧತ್ತೇ ಶಿಷ್ಯಃ ಪಾದಂ ಸ್ವಮೇಧಯಾ ।**
**ಪಾದಂ ಸದ್ಬ್ರಹ್ಮಚಾರೀಭ್ಯಃ ಪಾದಂ ಕಾಲಕ್ರಮೇಣ ತು ॥**

ಗುರುವಿನಿಂದ ಕಾಲುಭಾಗ, ಸ್ವಂತ ಕಲಿಕೆಯಿಂದ ಕಾಲುಭಾಗ, ಸಹಪಾಠಿಗಳಿಂದ ಕಾಲುಭಾಗವನ್ನು ಕಲಿತು, ಉಳಿದ ಕಾಲುಭಾಗವನ್ನು ಕಾಲಕ್ರಮೇಣ ಬದುಕಿನಿಂದ ಕಲಿಯಬೇಕು. ಇಂದಿನ ಶಿಕ್ಷಕ ಮತ್ತು ಶಿಷ್ಯರೀರ್ವರೂ ಗಮನಿಸಬೇಕಾದ ಮಹತ್ವದ ಮಾತಿದಲ್ಲವೇ?

ಶ್ರೀವೇದಾಂತ ದೇಶಿಕರು ಹೀಗೆ ಹೇಳುತ್ತಾರೆ: “ಕುತೂಹಲಕರವಾದ ವಾರ್ತೆ, ನಿರ್ಮಲವಾದ ವಿದ್ಯೆ, ಲೋಕೋತ್ತರವಾದ ಕಸ್ತೂರಿಯ ಪರಿಮಳ– ಇವು ನೀರಿನಲ್ಲಿ ಬಿದ್ದ ಎಣ್ಣೆಯ ಬಿಂದುವಿನ ಹಾಗೆ ವಿಸ್ತಾರವಾಗುತ್ತಾ ಹೋಗುತ್ತವೆ.” ಹೀಗೆ ಕಷ್ಟಪಟ್ಟು ಗಳಿಸಿದ ವಿದ್ಯೆಯು ಜೀವನದುದ್ದಕ್ಕೂ ವಿಕಾಸವಾಗುತ್ತ ಹೋಗಬೇಕು.

ಹಿಂದಿಗಿಂತಲೂ ಈಗ ಜ್ಞಾನದ ಪರಿಧಿ ಅತ್ಯಂತ ವಿಸ್ತಾರವಾಗಿದೆ, ಆಗುತ್ತಲೂ ಇದೆ. ಶಿಕ್ಷಣದಲ್ಲಿ ವಿವಿಧ ಜ್ಞಾನಶಾಖೆಗಳು ಬೆಳೆದಿವೆ, ಬೇರೆ ಬೇರೆ ತತ್ವಗಳು ಶಕ್ತಿಯುತವಾಗುತ್ತಿವೆ. ಆದರೆ ಇಂದಿನ ವಿದ್ಯಾರ್ಥಿಗಳಿಗೆ ಏನನ್ನು ಕಲಿಯಬೇಕು, ಹೇಗೆ ಕಲಿಯಬೇಕು ಎಂಬುದೇ ಪ್ರಶ್ನೆಗಳಾಗುತ್ತಿವೆ, ಸವಾಲುಗಳಾಗುತ್ತಿವೆ.

ಮಕ್ಕಳಿಗೆ ಕಲಿಕೆಯ ಕಾಲದಲ್ಲಿ ಏನೋ ಹೊಸದನ್ನು ತಾನೇ ಹುಡುಕಿ ಕಂಡುಕೊಂಡೆ ಎನಿಸಬೇಕು. ಆ ಜ್ಞಾನವನ್ನು ಸಾಮಾಜಿಕ ಜೀವನಕ್ಕೆ ಉಪಯೋಗಿಸುವ ಕಲೆ ಅವರಿಗೆ ಕರಗತವಾಗಬೇಕು. ಕೇವಲ ವಿಷಯಸಂಗ್ರಹ ಸಲ್ಲದು, ಅದಕ್ಕೆ ಶೋಧನ ಪ್ರವೃತ್ತಿಯೂ ಸೇರಬೇಕು. ಆ ವಿಸ್ತಾರವಾದ ಜ್ಞಾನಕ್ಕೆ ವಿವೇಕದ ಕಡಿವಾಣ ಅಥವಾ ಹತೋಟಿ ಇರಬೇಕು. ಎಲ್ಲಾ ಮತಧರ್ಮಗಳು ಇತರರನ್ನು ಗೌರವದಿಂದ ಕಾಣಬೇಕು ಎಂದು ಬೋಧಿಸುತ್ತವೆ. ಜ್ಞಾನವಿಜ್ಞಾನಗಳೊಂದಿಗೆ ಉತ್ತಮ ರಸಿಕತೆಯೂ, ಸೌಂದರ್ಯ ಪ್ರಜ್ಞೆಯೂ ಮೂಡಿದರೆ ಸಮಚಿತ್ತ ಸಾಧ್ಯ. ಬುದ್ಧಿವಂತರಾದವರಿಗೆ ಬಾಳಿನ ಆಂತರ್ಯದ ಉದ್ದೇಶ ಮನವರಿಕೆಯಾಗಬೇಕಲ್ಲವೇ? ಆರೋಗ್ಯಪಾಲನೆ, ಆಹಾರೋತ್ಪತ್ತಿ, ಕೈಗಾರಿಕೆ ಮತ್ತು ಮನೋರಂಜನೆಯ ಕ್ಷೇತ್ರಗಳಲ್ಲಿ, ವಿಜ್ಞಾನದ ಜೊತೆಗೆ ನೈತಿಕತೆಯನ್ನೂ ಕಾಣುವ ವಿವೇಕ ಇರಬೇಕು. ದಾರ್ಶನಿಕ ಕವಿ ಡಿ.ವಿ.ಜಿ.ಯವರ ಮಾತನ್ನು ಬಳಸಿಕೊಂಡು ಹೇಳುವುದಾದರೆ, “ಹೊಸ ಚಿಗುರು ಹಳೆಬೇರು ಕೂಡಿದಂತೆ” ಋಷಿವಾಕ್ಯದೊಡನೆ ವಿಜ್ಞಾನ–ಕಲೆಗಳು ಮೇಳವಿಸಿದ ವಿದ್ಯೆ ನಮ್ಮದಾಗಬೇಕು.

## ನಮಗೆ ಎಂತಹ ಶಿಕ್ಷಕರು ಬೇಕು?

ಸದಾ ಕಲಿಯುತ್ತಿರುವವನಲ್ಲದ ಶಿಕ್ಷಕ, ಹೇಗೆ ಬೋಧಿಸಬಲ್ಲ? ತನ್ನ ಬತ್ತಿಯನ್ನು ಉರಿಸಿಕೊಳ್ಳದ ದೀಪ ಇನ್ನೊಂದು ದೀಪವನ್ನು ಬೆಳಗಬಹುದೇ? ತನ್ನ ಕ್ಷೇತ್ರದಲ್ಲಿ ಜೀವಂತವಾಗಿ ತೊಡಗಿಸಿಕೊಳ್ಳದ, ಹೊಸ ಕ್ಷಿತಿಜಗಳನ್ನು ಕಂಡುಕೊಳ್ಳದವ ಅದೆಂತಹ ಗುರು? ಅಂಥವನು ವಿಷಯವನ್ನು ಮಸ್ತಕಕ್ಕೆ ತೆಗೆದುಕೊಳ್ಳದೆ, ಕಂಠಪಾಠ ಮಾಡಿ ಪುಸ್ತಕದಿಂದ ಪುಸ್ತಕಕ್ಕೆ ರವಾನಿಸುತ್ತಾನೆ. ವಿದ್ಯಾರ್ಥಿಗಳೂ ಕೇವಲ ಮಾಹಿತಿ ತುಂಬುವ ಚೀಲಗಳಾಗುತ್ತಾರೆಯೇ ಹೊರತು ಬುದ್ಧಿ ಬೆಳೆಯುವ ಗದ್ದೆಗಳಾಗುವುದಿಲ್ಲ. ನಮ್ಮಲ್ಲಿನ ಅನೇಕ ಶಿಕ್ಷಕರಿಗೆ ವಿವಿಧ ವಿಷಯಗಳು ಶಬ್ದಗಳ ಶವಗಳಷ್ಟೆ. ಹೀಗಿದ್ದರೆ, ಕೊಠಾರಿ ಶಿಕ್ಷಣ ಆಯೋಗದ ಆರಂಭದ ವಾಕ್ಯವಾದ, “ಭಾರತದ ಭವಿಷ್ಯವು ಅದರ ಶಾಲಾ ತರಗತಿಗಳಲ್ಲಿ ರೂಪಿಸಲ್ಪಡುತ್ತದೆ” ಎಂಬ ಮಾತು ನಿಜವಾಗುವುದಾದರೂ ಹೇಗೆ? ಈ ಹಿನ್ನೆಲೆಯಲ್ಲಿ ಶಿಕ್ಷಕರು ತಮ್ಮ ಕರ್ತವ್ಯಪಾಲನೆಯಲ್ಲಿ ಗಮನಿಸಬೇಕಾದ ಕೆಲವು ಅಂಶಗಳು ಹೀಗಿವೆ. ಇವು ಒಬ್ಬ ಸಾಧಾರಣ ಶಿಕ್ಷಕನನ್ನೂ ಉತ್ತಮ ಶಿಕ್ಷಕನನ್ನಾಗಿ ಪರಿವರ್ತಿಸಲು ಸಹಕಾರಿಯಾಗುತ್ತವೆ:

- ಶಿಕ್ಷಕರು ವಿದ್ಯಾರ್ಥಿಗಳ ಕುತೂಹಲವನ್ನು ಕೆರಳಿಸಿ, ಅಂತಶ್ಶಕ್ತಿಯನ್ನು ಶೋಧಿಸಿ, ಪ್ರತಿಭಾವಂತರನ್ನು ಗುರುತಿಸಬೇಕು.
- ಶಿಕ್ಷಕರ ಸಾಮರ್ಥ್ಯವನ್ನು ಪರೀಕ್ಷಿಸುವಂಥ, ಅಣಕಿಸುವಂಥ ಸನ್ನಿವೇಶಗಳು ಬಂದಾಗ ಅವರು ವಿಚಲಿತರಾಗಬಾರದು.
- ಪ್ರತಿಯೊಬ್ಬ ವಿದ್ಯಾರ್ಥಿಯೂ ಎಲ್ಲದರಲ್ಲೂ ಜಾಣನಾಗಿರಲು ಸಾಧ್ಯವೇ? ಹಾಗೆಯೇ ಪ್ರತಿಯೊಬ್ಬ ವಿದ್ಯಾರ್ಥಿ ಎಲ್ಲದರಲ್ಲೂ ದಡ್ಡನಾಗಿರಲೂ ಸಾಧ್ಯವೇ? ಇದನ್ನು ಶಿಕ್ಷಕ ಮನಗಾಣಬೇಕು.
- ಸ್ವ–ಅಭಿವ್ಯಕ್ತಿಗೆ ತೊಂದರೆ ಇರುವ ಮಕ್ಕಳನ್ನು ಗುರುತಿಸಿ,

ಪ್ರೋತ್ಸಾಹಿಸಿ, ಪ್ರೇರೇಪಿಸಿ, ಹಂತಹಂತವಾಗಿ ಮೇಲೆತ್ತಬೇಕಾದುದು ಶಿಕ್ಷಕರ ಆದ್ಯಕರ್ತವ್ಯ.

- ಮಕ್ಕಳ ಪೋಷಕರನ್ನು ಸಂಪರ್ಕಿಸಿ, ತಮ್ಮ ಮಕ್ಕಳ ಬಗ್ಗೆ ಅವರ ಧೋರಣೆ ಸರಿಯಾಗಿಲ್ಲದಿದ್ದರೆ, ಅವರ ತಪ್ಪು ಭಾವನೆಗಳನ್ನು ತಿದ್ದಲು ಶಿಕ್ಷಕರು ಮುಂದಾಗಬೇಕು.
- ಪ್ರಶ್ನೆಗಳಿಗೆ 'ಥಟ್' ಎಂದು ಉತ್ತರ ಕೊಡುವ ಪ್ರತಿಭಾವಂತ ಮಕ್ಕಳತ್ತಲೇ ಗಮನ ನೀಡಿ, ಹೊಗಳಿ ಅವರನ್ನು ಘನ ವಿದ್ವಾಂಸರಂತೆ ಕಾಣುವುದೂ, ಅಂತಹ ಮಕ್ಕಳು ತರಗತಿಯಲ್ಲಿ ಇರುವುದೇ ಒಂದು ಅದೃಷ್ಟ ಎಂಬ ಭಾವನೆ ತೋರುವುದೂ ನಿಲ್ಲಬೇಕು.
- ಪರೀಕ್ಷೆಗಳಿಗೆ ಅತಿಯಾದ ಒತ್ತು ನೀಡುವುದನ್ನು ನಿಲ್ಲಿಸಬೇಕು. ಪರೀಕ್ಷೆಗಳ ಬಗ್ಗೆ ವಿದ್ಯಾರ್ಥಿಗಳ ಭೀತಿ ತೊಲಗಬೇಕು, ಕಲಿಕೆಯಲ್ಲಿ ಪರೀಕ್ಷೆಯೂ ಅಂತರ್ಗತವಾಗಿದೆ ಎಂಬ ಭಾವ ಮಕ್ಕಳಿಗೆ ಮೂಡಿದರೆ ಪರೀಕ್ಷೆಯು 'ಭೂತ' ವಾಗುವುದಿಲ್ಲ. ಇದಕ್ಕೆ ಶಿಕ್ಷಕನು ವಿದ್ಯಾರ್ಥಿಗಳಿಗೆ ಸರಿಯಾದ ಆಪ್ತಸಲಹೆ ನೀಡಬೇಕು.
- ಶಾಲಾ ಶಿಕ್ಷಣ ಪಡೆಯದೇ ಅದ್ಭುತ ಸಾಧನೆ ಮಾಡಿರುವವರಿಲ್ಲವೇ? ಅವರ ಉದಾಹರಣೆ ನೀಡಬೇಕು.
- ಸಂಕೋಚದ ಮುದ್ದೆಯಾದ ವಿದ್ಯಾರ್ಥಿಯನ್ನು ಗುರುತಿಸಿ, ಅವನಿಂದ ಉಪಾಯವಾಗಿ ಉತ್ತರ ಹೇಳಿಸಿ, 'ಭೇಷ್' ಎನ್ನಬೇಕು. ಆಗ ಅವನಿಗೆ ಕಲಿಕೆಯಲ್ಲಿ ಆಸಕ್ತಿ ಮೂಡುವುದು.
- ಶಿಕ್ಷಣವು ಮಕ್ಕಳ ಪಾಲಿಗೆ ಎಂದಿಗೂ ಶಿಕ್ಷೆಯಾಗದಿರಲಿ, ಅದರಲ್ಲೂ ಜೀತದ ಶಿಕ್ಷಣವಾಗಿ ಖಂಡಿತ ಆಗದಿರಲಿ.
- ಸಹಶಿಕ್ಷಕರಿಗೆ ಗೌರವಕೊಡುವುದು ಪ್ರತಿಯೊಬ್ಬ ಶಿಕ್ಷಕನ ಆದ್ಯ ಕರ್ತವ್ಯ. ಯಾವ ಕಾರಣಕ್ಕೂ ಸಹೋದ್ಯೋಗಿಯೊಡನೆ 'ಶೀತಲ ಸಮರ' ಕೂಡದು. ಎಲ್ಲರಲ್ಲೂ ಮೆಚ್ಚುವ ಗುಣಗಳಿರುತ್ತವೆ, ಅವನ್ನು ಹುಡುಕಿ ಎತ್ತಿ ತೋರಿಸುವ ಸೌಜನ್ಯವು ಶಿಕ್ಷಕರಲ್ಲಿನ ಸಂಬಂಧವನ್ನು ಮಧುರವಾಗಿಸುವುದು; ಅದರಿಂದ ಮಕ್ಕಳಿಗೂ ಉತ್ತಮ 'ಜೀವನ ಕೌಶಲ' ದೊರಕುವುದು.

ಸನ್ಮಿತ್ರ ಸಂಪಾದನೆ ಕೂಡ ಶಿಕ್ಷಕರಿಗೆ ಬಹಳ ಅವಶ್ಯವಾದ ಗುಣವಾಗಿದೆ. ಆ ಮಿತ್ರರು ಸನ್ಮಿತ್ರರೆಂಬುದನ್ನು ಶಿಕ್ಷಕರು ಖಚಿತ ಮಾಡಿಕೊಳ್ಳಬೇಕು. ಪಾಠ ಪ್ರವಚನಗಳ ನಂತರ ವಿಷಯ ಸಂಬಂಧವಾದ ಸಂದೇಹ, ಭಿನ್ನಮತಗಳಿದ್ದಲ್ಲಿ ಆ ಸನ್ಮಿತ್ರರೊಡನೆ ಚರ್ಚೆ, ಸಂವಾದ ನಡೆಸುವುದು ಅತ್ಯಗತ್ಯ. ಜೊತೆಗೆ ಸಾಹಿತ್ಯ ಸಂಗೀತ ಕಲೆಗಳಲ್ಲಿ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಮಿತ್ರರು ಸಹಾಯ ಮಾಡುತ್ತಾರೆ. ಇಂದಿನ ದಿನಗಳಲ್ಲಿ ಪ್ರಮುಖವಾಗುತ್ತಿರುವ ಪ್ರಾಜೆಕ್ಟ್‌ಗಳನ್ನು ನಿರ್ವಹಿಸಲು ಗೆಳೆಯರು ಮತ್ತೆ ಮತ್ತೆ ಸೇರಬೇಕಾಗುತ್ತದೆ. ಅಂಥವರನ್ನು ದೊರಕಿಸಿಕೊಳ್ಳುವುದು ಶಿಕ್ಷಕರ ಜವಾಬ್ದಾರಿ.

### ಶಿಕ್ಷಣದ ಗುರಿ

ವಿದ್ಯಾರ್ಥಿಗಳು ಏನನ್ನು ಆಲೋಚಿಸಬೇಕೆನ್ನುವುದಕ್ಕಿಂತ, ಹೇಗೆ ಆಲೋಚಿಸಬೇಕೆಂದು ಕಲಿತುಕೊಳ್ಳುವಂತೆ ಮಾಡುವುದು ಶಿಕ್ಷಕರ ಕರ್ತವ್ಯ. ವಿದ್ಯಾರ್ಥಿಗಳು ಉತ್ತರಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕಿಂತ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಹೆಚ್ಚು ಆನಂದ ಪಡೆಯುವರು. ಆರ್ಕಿಮಿಡೀಸ್ 'ಯುರೇಕಾ' ಎಂದಾಗ ಉಂಟಾದ ಸಂತೋಷದಂತಹ ಆನಂದ, ಕಲಿಕೆಯಲ್ಲಿಯೂ ಮಕ್ಕಳಿಗೆ ದೊರೆಯಬೇಕಲ್ಲವೆ?.

ನಾನು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪಡೆದಿದ್ದ ಭಾಷಾ ಉಪಾಧ್ಯಾಯರು, ಗಣಿತ ಉಪಾಧ್ಯಾಯರು ತಮ್ಮ ವಿಷಯಪಾಂಡಿತ್ಯ ಮತ್ತು ಬೋಧನಾ ಚಾತುರ್ಯದೊಂದಿಗೆ, ಅತ್ಯುತ್ತಮ ಮಾನವೀಯ ವ್ಯಕ್ತಿತ್ವದ ಮೂಲಕ ನನ್ನ ಮನಸ್ಸಿನಲ್ಲಿ ಚಿರಮುದ್ರೆಯನ್ನೊತ್ತಿದ್ದಾರೆ. ಇಂತಹ ಶಿಕ್ಷಕರ ಸಂತತಿ ಸಾವಿರವಾಗಲಿ ಎಂದು ಆಶಿಸುತ್ತೇನೆ. ★

## ಸ್ನೇಹಪ್ರಭ

**ಎಲ್ಲೆಡೆ ಅಪನಂಬಿಕೆ, ದ್ರೋಹ, ಭ್ರಷ್ಟಾಚಾರ, ವಂಚನೆ, ಅದಕ್ಷತೆ ಮತ್ತು ಅಶಿಸ್ತುಗಳನ್ನೇ ಕಾಣುತ್ತಿದ್ದೇವೆ. ಹೀಗಾಗಿ ಯಾರನ್ನೂ, ಯಾವುದನ್ನೂ ನಂಬಲು, ಅವಲಂಬಿಸಲು ಮನಸ್ಸೇ ಬರುತ್ತಿಲ್ಲ. ಎಲ್ಲರಲ್ಲೂ, ಎಲ್ಲದರಲ್ಲೂ ಅನುಮಾನವೇ ಕಾಡುತ್ತದೆ ಇದಕ್ಕೆ ಪರಿಹಾರವೇನು?**


ದೇವರನ್ನು ನಂಬುವುದೊಂದೇ ಪರಿಹಾರ. ಅವನಲ್ಲಿ ನಮಗೆ ಶ್ರದ್ಧೆ ಭಕ್ತಿಗಳಿದ್ದರೆ, ಅವನನ್ನೇ ನೆಚ್ಚಿಕೊಂಡಿದ್ದರೆ ಅವನೇ ಒಳ್ಳೆಯ ಪರಿಸರವನ್ನು ನಮಗಾಗಿ ಒದಗಿಸಿಕೊಡುತ್ತಾನೆ. ನಾವು ನಿರಾಶರಾಗಬಾರದು, ಹತಾಶರಾಗಬಾರದು ಮತ್ತು ಅಪನಂಬಿಕೆಗೆ ಬಲಿಯಾಗಬಾರದು. ಇದು ಮನಸ್ಸನ್ನು ಇನ್ನೂ ಕುಗ್ಗಿಸುತ್ತದೆ, ನಿರುತ್ಸಾಹಿಗಳನ್ನಾಗಿ ಮಾಡುತ್ತದೆ. ಜೀವನವೊಂದು ಹೋರಾಟ. ನಾವು ಹೋರಾಟ ನಿಲ್ಲಿಸಿದರೆ ವಿರುದ್ಧ ಶಕ್ತಿಗಳು ನಮ್ಮನ್ನು ನಿರ್ನಾಮಮಾಡುತ್ತವೆ. ಎಲ್ಲವೂ ಅನುಕೂಲವಾಗಿದ್ದರೆ ಹೋರಾಟಕ್ಕೆ ಅವಕಾಶವೇ ಇರುವುದಿಲ್ಲ. ಹೋರಾಟವಿಲ್ಲದೆ ಬೆಳವಣಿಗೆಯೂ ಇರುವುದಿಲ್ಲ. ಹೋರಾಟದಿಂದಲೇ ಶಕ್ತಿ ಬರುತ್ತದೆ –ವಿಶೇಷವಾಗಿ ಮಾನಸಿಕ ಶಕ್ತಿ. ಯಾವ ಹೋರಾಟವೂ ಇಲ್ಲದಿದ್ದರೆ ನಾವು ಶವದಂತಾಗುತ್ತೇವೆ –ಶವದಲ್ಲಿ ಯಾವ ಹೋರಾಟವೂ ಇರುವುದಿಲ್ಲ.

ನಾವು ಸಮಾಜದಲ್ಲಿ ಒಂದು ಬದಲಾವಣೆ ತರಲು ಪ್ರಯತ್ನಿಸಬೇಕು. ನಮ್ಮದೇ ಕಿರುವಲಯದಲ್ಲಿ ಸ್ವಲ್ಪ ಬದಲಾವಣೆ ಉಂಟಾದರೂ ಅನೇಕರಿಗೆ ಅದರಿಂದ ಪ್ರಯೋಜನ ಉಂಟಾಗುತ್ತದೆ (**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್**). ಸುಮ್ಮನೆ ಸಮಾಜವನ್ನು ದೂಷಿಸಿ ಪ್ರಯೋಜನವಿಲ್ಲ. ನಾವು ಸಮಾಜ ನಿರ್ಮಾಪಕರಾಗಬೇಕು. ಸಮಾಜ ಕೆಟ್ಟುಹೋಗಿದ್ದರೆ ನಾವೆಲ್ಲರೂ ಅದಕ್ಕೆ ಜವಾಬ್ದಾರರು. ಒಳ್ಳೆಯವರು ಸುಮ್ಮನಿರುವುದರ ಮೂಲಕ ಅದಕ್ಕೆ ಜವಾಬ್ದಾರರಾಗುತ್ತಾರೆ. ಆದ್ದರಿಂದ ನಾವು ಕೇವಲ ಒಳ್ಳೆಯವರಾಗಿದ್ದರೆ ಸಾಲದು, ಕ್ರಿಯಾಶೀಲರೂ ಆಗಬೇಕು. ನಿರಾಶರಾಗದೆ, ಹತಾಶರಾಗದೆ ನಾವು ಕಾರ್ಯೋನ್ಮುಖರಾಗೋಣ, ಭವಿಷ್ಯದ ಉತ್ತಮ ಸಮಾಜದ ಕನಸು ಕಾಣೋಣ. ಮುಂದೆ ಯಾರ ಮೂಲಕವಾದರೂ ಅದು ನನಸಾಗಬಹುದು. (ಬರಹ: **ಸ್ವಾಮಿ ನಿತ್ಯಸ್ಥಾನಂದ**)

# ಶೈಕ್ಷಣಿಕ ರಂಗದ ಅದ್ಭುತ: ಆದರ್ಶ ವಿಜ್ಞಾನಿ ಮಾರಿಯೋ ಕೆಪಚ್ಚಿ

ಡಾ. ರಾ.ಲ.ಜಗದೀಶ್

ವಿದ್ಯಾರ್ಥಿಜೀವನವು ಮನುಷ್ಯನ ಬದುಕಿನಲ್ಲಿಯೇ ಅತ್ಯಂತ ಅಮೂಲ್ಯ ಅವಧಿಯಾಗಿದೆ. ಅದನ್ನು ಸದುಪಯೋಗಪಡಿಸಿಕೊಂಡರೆ, ಬಾಳಿನಲ್ಲಿ ಸಾರ್ಥಕತೆಯನ್ನು ಪಡೆಯಬಹುದು. ಎಂತಹ ದುಸ್ತರ ಪರಿಸ್ಥಿತಿಯಲ್ಲಿಯೂ ಜ್ಞಾನದಾಹದ ಕಿಚ್ಚನ್ನು ನಂದಿಸಿಕೊಳ್ಳದೆ, ಮಹತ್ವದ ವಿಜ್ಞಾನಿಯಾಗಿ ಮೂಡಿಬಂದ ಮಹಾನ್ ಸಾಧಕನೊಬ್ಬನ ಈ ರೋಚಕ ಕಥೆಯನ್ನು ಬರೆದಿರುವ ಲೇಖಕರು ಮಂಡ್ಯ ಜಿಲ್ಲೆಯ ತೂಬಿನಕೆರೆಯಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ಪಾಲಿಮರ್ ವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರಾಗಿದ್ದಾರೆ.



**ನೊ**ಬೆಲ್ ಪ್ರಶಸ್ತಿಗಳು ಅತ್ಯುತ್ತಮ ವಿಜ್ಞಾನಿಗಳನ್ನು ಮಾನವ ಸಮುದಾಯಕ್ಕೆ ಪರಿಚಯಿಸಿವೆ. ಅಂಥವರಲ್ಲಿ ಒಬ್ಬರು, ೨೦೦೭ರ 'ವೈದ್ಯಕೀಯ ವಿಜ್ಞಾನ'ದ ಪ್ರಶಸ್ತಿ ಪಡೆದುಕೊಂಡ ವಿಶಿಷ್ಟ ವ್ಯಕ್ತಿ ಮಾರಿಯೋ ಕೆಪಚ್ಚಿ. ಅದನ್ನು ಇನ್ನಿಬ್ಬರ ಜೊತೆಯಲ್ಲಿ ಅವರು ಹಂಚಿಕೊಂಡರು. ಪ್ರಶಸ್ತಿ ಸ್ವೀಕಾರದ ಅನಂತರವಷ್ಟೇ ಅವರ ಜೀವನಗಾಥೆಯನ್ನು ಕೇಳಿತಿಳಿದ ಇಡೀ ವಿಶ್ವ ಅಚ್ಚರಿಪಟ್ಟಿತು.

ಎಲ್ಲ ಮಕ್ಕಳಂತೆ ಕೆಪಚ್ಚಿಯವರ ಬಾಲ್ಯ ಇರಲಿಲ್ಲ. ಪೂರ್ಣ ಪ್ರಮಾಣದ ಪಾಲನೆ, ಪೋಷಣೆಗಳು ಅವರಿಗೆ ಕನಸಾಗಿದ್ದವು. ಮೂರೂವರೆ ವರ್ಷದ ಬಾಲಕನಾಗಿದ್ದಾಗಲೇ ಅನೇಕ ಕಷ್ಟಕಾರ್ಪಣ್ಯಗಳನ್ನು ಅವರು ಎದುರಿಸಬೇಕಾಯಿತು. ಯುದ್ಧದ ಕಾರ್ಮೋಡದಡಿಯಲ್ಲಿ, ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ, ಬಾಲ್ಯವನ್ನು ಕಳೆದ ಕೆಪಚ್ಚಿ, ಒಬ್ಬ ಅಸಾಮಾನ್ಯ ಸಂಶೋಧಕರಾಗಿ ರೂಪುಗೊಂಡರು. ಹೀಗಾಗಿ ಸಹಜವಾಗಿಯೇ, ಬೇರೆಯವರಿಗಿಂತ ವಿಭಿನ್ನವಾಗಿ ತಮ್ಮ ಬಾಳಿನ ಗುರಿಯನ್ನು ಅವರು ತಲುಪಿದರು. ಅವರ ಸಹಜ ಕನಸುಗಳು ಯಾವುದೇ ಕಾರಣಕ್ಕೂ ಕನಸಾಗಿಯೇ ಉಳಿಯಲಿಲ್ಲ. ಜೀವನದಲ್ಲಿ ದೊರಕುವ ಯಾವುದೇ ಚಿಕ್ಕ ಅವಕಾಶದ ಸದುಪಯೋಗ ಪಡೆದುಕೊಂಡು ಕನಸುಗಳನ್ನು ಸಾಕಾರಗೊಳಿಸಬಹುದು ಎನ್ನುವುದಕ್ಕೆ ಕೆಪಚ್ಚಿ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ.

ಜೈವಿಕ ಹಾಗೂ ಪರಿಸರದ ವಾಸ್ತವಾಂಶಗಳು ಮಾನವನ ಕ್ರಿಯಾತ್ಮಕ ಪ್ರತಿಭೆಗಳ ಬೆಳವಣಿಗೆಗೆ ಹೇಗೆ ಸಹಕಾರಿಯಾಗುತ್ತವೆ ಎನ್ನುವುದನ್ನು ಗುರುತಿಸುವ ವಿಧಾನ ಬಹಳ ಸಂಕೀರ್ಣವಾದುದು. ಇಂಥ ಜ್ಞಾನವು ಮಾನವನಲ್ಲಿ ಇಲ್ಲದಿರುವುದರಿಂದ, ಎಲ್ಲಾ ಮಕ್ಕಳಿಗೂ ಸಮಾನ ರೀತಿಯ ಅವಕಾಶ ಕಲ್ಪಿಸುವುದು ಮತ್ತು ಅವರ ಕನಸುಗಳನ್ನು ನನಸಾಗಿಸುವುದಕ್ಕೆ ಸಹಕಾರಿಯಾಗುವುದು, ಶಿಕ್ಷಣ ವ್ಯವಸ್ಥೆಯಲ್ಲಿ ಬಹಳ ಪ್ರಮುಖವಾಗುತ್ತದೆ. ಕೆಪಚ್ಚಿ ಅವರೇ ಹೇಳುವಂತೆ, ಈಗ ನಮಗೆ ಗೊತ್ತಿರುವ 'ಮಾನವನ ಅಭಿವೃದ್ಧಿಯ ತಿಳಿವಳಿಕೆ' ಬಹು ಅತ್ಯಲ್ಪವಾದುದು. ಇದರಿಂದ, ಮುಂದಿನ ಪೀಳಿಗೆಯಲ್ಲಿ ಹುಟ್ಟಿ ಬರಬಹುದಾದ ಮಾರ್ಟಿನ್ ಲೂಥರ್ ಕಿಂಗ್, ಬೆಥೋವೆನ್ ಮುಂತಾದ ಮಹಾನ್ ಸಾಧಕರನ್ನು ಕಂಡುಕೊಳ್ಳುವುದು ಕಷ್ಟಸಾಧ್ಯ.

ಕೆಪಚ್ಚಿಯವರ ಜನನ ಇಟಲಿಯ ವೆರೋನಾದಲ್ಲಿ ೧೯೩೭ರ ಅಕ್ಟೋಬರ್ ೭ ರಂದು ಆಯಿತು. ಫ್ಯಾಸಿಸ್ಟ್, ನಾಝಿ ಮತ್ತು ಕಮ್ಯೂನಿಸ್ಟರ ನಿರಂಕುಶಪ್ರಭುತ್ವ ಆ ದೇಶದೆಲ್ಲೆಡೆ ಆಗ ವ್ಯಾಪಿಸಿತ್ತು. ತಾಯಿ ಲೂಸಿ ರ್‍ಯಾಂಬರ್ಗ್ ಒಬ್ಬ ಕವಯಿತ್ರಿ; ತಂದೆ ಲೂಸಿಯಾನೊ ಕೆಪಚ್ಚಿ ಇಟಲಿಯ ವೈಮಾನಿಕ ದಳದಲ್ಲಿ ಅಧಿಕಾರಿ. ಅತೀವ ಪ್ರಕ್ಷುಬ್ಧತೆ, ಗೊಂದಲಗಳಿಂದ ಕೂಡಿದ ಕಾಲ ಅದಾಗಿತ್ತು. ಅವರ ಬಾಲ್ಯ ಇಬ್ಬರು ಸಹೋದರರೊಡನೆ ಇಟಲಿಯ ಫ್ಲಾರೆನ್ಸ್‌ನಲ್ಲಿರುವ ಒಂದು ಸುಂದರವಾದ ತೋಟದ ಮನೆಯಲ್ಲಿ ಕಳೆಯಿತು.

ಕೆಪಚ್ಚಿಯ ತಾಯಿಗೆ ಕಾವ್ಯ ಮತ್ತು ನಾಟಕಗಳಲ್ಲಿ ಅಭಿರುಚಿ ಇತ್ತು. ಆಕೆ ಜರ್ಮನ್ ಭಾಷೆಯಲ್ಲಿ ಕಾವ್ಯವನ್ನು ರಚಿಸುತ್ತಿದ್ದಳು. ವಿಶ್ವವಿದ್ಯಾನಿಲಯದ ತರಬೇತಿಯನ್ನು ಪ್ಯಾರಿಸ್‌ನ ಸಾರ್‌ಬಾನ್‌ನಲ್ಲಿ ಮುಗಿಸಿ, ಅಲ್ಲಿಯೇ ಸಾಹಿತ್ಯ ಹಾಗೂ ಭಾಷಾಶಾಸ್ತ್ರಗಳಲ್ಲಿ ಉಪನ್ಯಾಸಕಿಯಾಗಿದ್ದಳು. ಆಕೆ ಫ್ಯಾಸಿಸ್ಟ್‌ಗಳನ್ನು ಮತ್ತು ನಾಝಿಗಳನ್ನು ವಿರೋಧಿಸುತ್ತಿದ್ದ ಕವಿಗಳ ಗುಂಪನ್ನು ಸೇರಿದಳು. ಈ ವಿರೋಧ ಯಾವುದಾದರೊಂದು ದಿನ ತನಗೆ ಭೀಕರ ಸಮಸ್ಯೆಯನ್ನು ಒಡ್ಡುವುದೆಂದು ಆಕೆ ಚೆನ್ನಾಗಿ ಅರಿತಿದ್ದಳು.

೧೯೩೭ರಲ್ಲಿ ಕೆಪಚ್ಚಿಯ ತಾಯಿ ಇಟಲಿಯ ಆಲ್ಪ್ಸ್ ಪರ್ವತ ಪ್ರದೇಶದಲ್ಲಿನ ಒಂದು ತಡಿಕೆಯ ಮನೆಗೆ ಸ್ಥಳಾಂತರಗೊಂಡಳು. ತನ್ನ ಮೂರೂವರೆ ವಯಸ್ಸಿನವರೆಗೆ ಬಾಲಕ ಕೆಪಚ್ಚಿ ಅಲ್ಲಿಯೇ ಇದ್ದನು. ಅದಾಗಿ ಕೆಲವೇ ದಿನಗಳಲ್ಲಿ, ಜರ್ಮನಿಯ ಅಧಿಕಾರಿಗಳು ಅಲ್ಲಿಗೆ ಬಂದು ಆಕೆಯನ್ನು ದಸ್ತಗಿರಿ ಮಾಡಿದರು.

ಕೆಪಚ್ಚಿಯ ತಾಯಿಗೆ ಜರ್ಮನಿಯ ಅಧಿಕಾರಿಗಳು ಯಾವಾಗಲಾದರೂ ತನ್ನನ್ನು ಕೈದು ಮಾಡಬಹುದೆಂಬ ಅನುಮಾನವಿದ್ದಿತು. ಅವಳು ತನ್ನನ್ನು ಎಳೆದೊಯ್ಯುವ ಮೊದಲು ತನ್ನಲ್ಲಿದ್ದ ಎಲ್ಲ ವಸ್ತುಗಳನ್ನೂ ಮಾರಿ, ಆ ಆದಾಯವನ್ನು ಹಾಗೂ ತಾನು ಗಳಿಸಿದ್ದ ಹಣವನ್ನು, ಇಟಲಿಯಲ್ಲಿನ ಟೈಲಾಲ್ ಎಂಬ ಊರಿನ ಬೇಸಾಯಗಾರನೊಬ್ಬನ ಕುಟುಂಬಕ್ಕೆ ನೀಡಿದ್ದಳು. ಅವನನ್ನು ಕೆಪಚ್ಚಿಯ ಉಸ್ತುವಾರಿ ನೋಡಿಕೊಳ್ಳುವಂತೆ ಕೇಳಿಕೊಂಡಿದ್ದಳು. ಇಲ್ಲಿ ಕೆಪಚ್ಚಿ ಒಂದು ವರ್ಷ ಕಳೆದನು. ಅತ್ಯಂತ ಸರಳ ಜೀವನ ಅಲ್ಲಿಯದಾಗಿದ್ದಿತು. ಗೋಧಿಯನ್ನು ಬೆಳೆದು, ಒಕ್ಕಣೆ ಮಾಡಿ, ಹಿಟ್ಟು ಮಾಡಿ, ಆ ಹಿಟ್ಟಿನಿಂದ ಬ್ರೆಡ್ ಅನ್ನು ತಯಾರಿಸುತ್ತಿದ್ದರು. ಅಲ್ಲಿದ್ದ ಮಹಿಳೆಯರು ಬಾಲಕ ಕೆಪಚ್ಚಿಯನ್ನು ನೋಡಿಕೊಳ್ಳುತ್ತಿದ್ದರು.

ಎರಡನೆಯ ಮಹಾಯುದ್ಧದ ಕಾಲ. ಅದನ್ನು ಯುದ್ಧದ ಉತ್ಕಟ ಕಾಲ ಎನ್ನಬಹುದು. ಅಮೆರಿಕಾ ಹಾಗೂ ಬ್ರಿಟಿಷ್ ಸೈನ್ಯಗಳು ದಕ್ಷಿಣ ಇಟಲಿಯ ಕಡೆಯಿಂದ ಉತ್ತರಕ್ಕೆ ತೆರಳುತ್ತಿದ್ದವು. ಉತ್ತರ ಇಟಲಿಯ ನಗರಗಳ ಮೇಲೆ ದಿನನಿತ್ಯ ಬಾಂಬುಗಳ ಸುರಿಮಳೆಯಾಗುತ್ತಿತ್ತು. ಕರ್ಫ್ಯೂ ಹಾಗು ಕಗ್ಗತ್ತಲೆ ದಿನನಿತ್ಯದ ಸಂಗತಿಯಾಗಿತ್ತು. ರಾತ್ರಿಯ ವೇಳೆ ಯಾವುದೇ ದೀಪವನ್ನು ಉರಿಸುವಂತಿರಲಿಲ್ಲ. ಒಂದು ಮಧ್ಯಾಹ್ನ ಅಮೆರಿಕೆಯ ವಿಮಾನಗಳು ತಮ್ಮ ಸ್ವಯಂಚಾಲಿತ ಗನ್ನುಗಳಿಂದ ಸುತ್ತಲಿನ ಹೊಲಗಳ ಮೇಲೆ ಗುಂಡಿನ ಮಳೆಗೈದವು. ಅಲ್ಲಿಯೇ ತೋಟದಲ್ಲಿದ್ದ ಕೆಪಚ್ಚಿಯ ಮೊಣಕಾಲನ್ನು ಗುಂಡೊಂದು ಸವರಿಕೊಂಡು ಹೋಯಿತು. ಅದೃಷ್ಟವಶಾತ್ ಅವನಿಗೆ ಸಣ್ಣ ಗಾಯ ಬಿಟ್ಟರೆ ಬೇರೇನೂ ಆಗಲಿಲ್ಲ.

ತನ್ನ ತಾಯಿ ನೀಡಿದ ಹಣ ಒಂದೇ ವರ್ಷಕ್ಕೆ ಮುಗಿದಿದ್ದರಿಂದ ನಾಲ್ಕೂವರೆ ವರ್ಷದ ಕೆಪಚ್ಚಿ ಆ ಮನೆಯಿಂದ ಹೊರಕ್ಕೆ, ದಕ್ಷಿಣಕ್ಕೆ ಸಾಗುತ್ತಾನೆ. ಬೀದಿಗಳಲ್ಲಿ ಉಳಿದುಕೊಳ್ಳುತ್ತಾ, ಯಾವುದೇ ಆಶ್ರಯವಿಲ್ಲದೆ ಬೀದಿ ಮಕ್ಕಳ ಗುಂಪಿನೊಂದಿಗೆ ಹೊಸದೊಂದು ಜೀವನ ಆ ಕಿರಿಯ ವಯಸ್ಸಿನಲ್ಲಿ ಆರಂಭವಾಗುತ್ತದೆ. ಈ ಮಧ್ಯೆ ಅನಾಥಾಶ್ರಮವೊಂದು ಅವನಿಗೆ ಆಶ್ರಯ ನೀಡುತ್ತದೆ. ಬಹಳಷ್ಟು ದಿನಗಳು ಊಟವಿಲ್ಲದೆ ದೂಡಿದ ಕೆಪಚ್ಚಿ ಆ ಸಮಯ ರೋಚಕ ಹಾಗೂ ಉಜ್ವಲವಾಗಿದ್ದವು ಎಂದು ಮುಂದೆ ನೆನಪಿಸಿಕೊಳ್ಳುತ್ತಾರೆ. ಕೆಪಚ್ಚಿಯ ತಂದೆ ಅವನನ್ನು ರೆಗಿಯೊ ಎಮಿಲಿಯ (Reggio Emiliae) ಪಟ್ಟಣಕ್ಕೆ ಕರೆದೊಯ್ದರಾದರೂ ಅವರ ಬೈಗುಳಗಳನ್ನು ತಡೆದುಕೊಳ್ಳದೆ ಅವರನ್ನು ತೊರೆದುದಾಗಿ ಕೆಪಚ್ಚಿ ನೆನಪಿಸಿಕೊಳ್ಳುತ್ತಾರೆ. ಯುದ್ಧದ ಭಯಕ್ಕಿಂತ, ಇಂಥ ಕೆಟ್ಟ ತಂದೆಯ ಮಗನಾಗಿರುವುದಕ್ಕೆ ಕೆಪಚ್ಚಿ ತಯಾರಾಗಿರಲಿಲ್ಲ. ಅನಂತರ ರೆಗಿಯೊ ಎಮಿಲಿಯಾದಲ್ಲಿ ಒಬ್ಬ ಪಾದ್ರಿಯ ಆಶ್ರಯದಲ್ಲಿ ಆತ ಬೆಳೆಯುತ್ತಾನೆ. ಆ ಪಾದ್ರಿ ಅನಾಥ ಮಕ್ಕಳ ಬಗೆಗೆ ಬಹಳ ಆಸ್ಥೆ ವಹಿಸಿದ್ದಲ್ಲದೇ ಕೆಪಚ್ಚಿಯ ಬಗೆಗೆ ವಿಶೇಷ ಆಸಕ್ತಿ ಹೊಂದಿದ್ದರು. ಆ ಪಾದ್ರಿಯಿಂದ ಕೆಪಚ್ಚಿಯವರಿಗೆ ನೊಬೆಲ್ ಪ್ರಶಸ್ತಿ ಬಂದ ನಂತರ, ಒಂದು ಪತ್ರ ಬಂದಿತ್ತು. ಸಾವಿರಾರು ಮಕ್ಕಳಲ್ಲಿ ಅವರು ತನ್ನನ್ನು ನೆನಪಿಟ್ಟುಕೊಂಡಿರುವುದೇ ಒಂದು ಸೋಜಿಗವೆನಿಸಿತು ಕೆಪಚ್ಚಿಯವರಿಗೆ. ಆ ಅನಾಥಾಲಯದಲ್ಲಿ ೧೯೪೫ ನೇ ಇಸವಿಯಲ್ಲಿ ಕೆಲವು ತಿಂಗಳು ಕಳೆದು, ಅಲ್ಲಿಂದಲೂ ಕೆಪಚ್ಚಿ ಓಡಿಹೋದನು.

೧೯೪೫ ರಲ್ಲಿ ಮ್ಯೂನಿಚ್ ಅನ್ನು ಅಮೆರಿಕದ ಸೈನ್ಯ ಬಿಡುಗಡೆ ಮಾಡಿತು. ಈ ಸಮಯದಲ್ಲಿಯೇ ಕೆಪಚ್ಚಿಯ ತಾಯಿಯೂ ಬಿಡುಗಡೆ ಹೊಂದಿದಳು. ಒಡನೆ ಅವಳು ಮಾಡಿದ ಮೊದಲನೇ ಕೆಲಸವೆಂದರೆ ಕೆಪಚ್ಚಿಯನ್ನು ಹುಡುಕಲು ಪ್ರಾರಂಭಿಸಿದ್ದು. ಕೆಪಚ್ಚಿಯ ೯ನೆಯ ಹುಟ್ಟಿದ ಹಬ್ಬದಂದು ತಾಯಿ ಅವನನ್ನು ಹುಡುಕುವಲ್ಲಿ ಯಶಸ್ವಿಯಾದಳು. ಆದರೆ ತಾಯಿ ಇದ್ದ ಸ್ಥಿತಿಯಲ್ಲಿ ಕೆಪಚ್ಚಿಗೆ ಆಕೆಯನ್ನು ಗುರುತಿಸುವುದೇ ಅಸಾಧ್ಯವಾಯಿತು. ತಾಯಿ ಮಗನನ್ನು ಕಂಡಿದ್ದು ಒಂದು ಆಸ್ಪತ್ರೆಯಲ್ಲಿ.

ಅಲ್ಲಿದ್ದ ಬಹಳಷ್ಟು ಮಕ್ಕಳು ಅಪೌಷ್ಟಿಕತೆ, ಟೈಫಾಯ್ಡ್ ಮತ್ತು ಇನ್ನಿತರ ಮಾರಣಾಂತಕ ರೋಗಗಳಿಂದ ನರಳುತ್ತಿದ್ದರು. ಒಂದು ದಿನಕ್ಕೆ ಅವರ ಆಹಾರ, ಒಂದು ಲೋಟ ಚಿಕೋರಿ ಕಾಫಿ ಮತ್ತು ಸ್ವಲ್ಪ ಹಳೆಯ ಬ್ರೆಡ್ ಮಾತ್ರ. ಒಂದರ ಪಕ್ಕ ಒಂದರಂತೆ ಹಲವಾರು ಹಾಸಿಗೆಗಳನ್ನು ಹಾಸಿದ್ದರು. ಅವೆಲ್ಲ ಮಕ್ಕಳಿಂದ ತುಂಬಿ ತುಳುಕುತ್ತಿದ್ದವು. ಹೊದಿಕೆಗಳು ಇರಲೇ ಇಲ್ಲ. ಯಾರ ಮೈಮೇಲೂ ಬಟ್ಟೆ ಕೂಡ ಸರಿಯಾಗಿ ಇರಲಿಲ್ಲವಾದ್ದರಿಂದ, ಯಾರೂ ಅಲ್ಲಿಂದ ಓಡಿಹೋಗುವ ಸಾಧ್ಯತೆಯೇ ಇರಲಿಲ್ಲ. ಮಕ್ಕಳಿಗೆ ಬಟ್ಟೆ ಇಲ್ಲದಿದ್ದುದರಿಂದ ಶುಚಿ ಮಾಡುವ ಕೆಲಸ ಸುಲಭ ಎಂದು ದಾದಿಯರು ಮಕ್ಕಳನ್ನು ಬೆತ್ತಲೆಯಾಗಿಯೇ ಬಿಟ್ಟಿದ್ದರು.

ಇನ್ನು ಇಲ್ಲಿಂದ ಬಿಡುಗಡೆಯ ಭಾಗ್ಯ ಇಲ್ಲವೇನೋ ಎಂದೆನಿಸುತ್ತಿತ್ತು ಬಾಲಕ ಕೆಪಚ್ಚಿಗೆ. ಆದರೆ ಅವನು ಹೊರಡುವ ದಿನ ಬಂದೇಬಿಟ್ಟಿತು! ಕೆಪಚ್ಚಿಯ ತಾಯಿ ಮಗನನ್ನು ಕೊನೆಗೂ ಹುಡುಕಿಕೊಂಡು ಬಂದಳು. ಅವನಿಗಾಗಿ ಹೊಸ ಬಟ್ಟೆಗಳನ್ನು ತಂದಿದ್ದಳು. ಬಟ್ಟೆಯ ಜೊತೆ ಮಕ್ಕಳು ಇಷ್ಟಪಡುವ ಪುಕ್ಕ ಇರುವ ಟೋಪಿಯೊಂದಿತ್ತು. ಆಗ ಕೆಪಚ್ಚಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಆ ಬಟ್ಟೆಗಳನ್ನು ಇಂದಿಗೂ ಅವರು ಇರಿಸಿಕೊಂಡಿದ್ದಾರೆ. ಅಲ್ಲಿಂದ ಕೆಪಚ್ಚಿಯನ್ನು ಅವರ ತಾಯಿ ರೋಮಿಗೆ ಕರೆದೊಯ್ದಳು. ಆರು ವರ್ಷದಲ್ಲಿ ಮೊದಲ ಬಾರಿಗೆ ಬಾಲಕ ಕೆಪಚ್ಚಿ ಸ್ನಾನ ಮಾಡಿದನು. ನಂತರ ಅವರಿಬ್ಬರೂ ನೇಪಲ್ಸ್‌ಗೆ ಪ್ರಯಾಣ ಮಾಡಿದರು. ತಾಯಿಯ ಕಿರಿಯ ತಮ್ಮ ಎಡ್ವರ್ಡ್ ಅಮೇರಿಕೆಗೆ ಹಡಗಿನಲ್ಲಿ ಹೋಗಲು ಹಣ ನೀಡಿದ್ದನು. ಅಮೇರಿಕೆಗೆ ಹೋಗುವ ವಿಷಯ ತಿಳಿದು ಕೆಪಚ್ಚಿಗೆ ಬಹಳ ಸಂತಸವಾಯಿತು. ಅವಕಾಶಗಳ ನಾಡು ಮತ್ತು ಚಿನ್ನದ ದೇಶವಾದ ಅಮೇರಿಕೆಗೆ ಹೋಗುತ್ತಿರುವುದು ಅವನಿಗೆ ಹೆಮ್ಮೆಯ ವಿಷಯವಾಗಿತ್ತು. ಅಮೇರಿಕೆಗೆ ಬಂದೊಡನೆ ಅವನಿಗೆ ಎಡ್ವರ್ಡ್, ಸಾರಾ ದಂಪತಿಗಳು ಆಶ್ರಯ ನೀಡಿದರು. ಎಡ್ವರ್ಡ್ ಅತ್ಯುತ್ತಮ ಭೌತಶಾಸ್ತ್ರಜ್ಞನಾಗಿದ್ದು ಸಂಶೋಧನೆಯಲ್ಲಿ ತೊಡಗಿದ್ದನು.

ಬಾಲ್ಯದ ಕಷ್ಟಕಾರ್ಪಣ್ಯಗಳಿಂದ ಕಂಗೆಟ್ಟಿದ್ದ ಬಾಲಕ ಕೆಪಚ್ಚಿಯ ನಡವಳಿಕೆ ಮಾಮೂಲಿ ಮಕ್ಕಳಂತಿರಲಿಲ್ಲ. ಹೀಗಾಗಿ ಅವನ ಪೋಷಕರು ಅನೇಕ ಮನಃಶಾಸ್ತ್ರಜ್ಞರ ಬಳಿಗೆ ಅವನನ್ನು ಕರೆದೊಯ್ದರು. ಆದರೂ ಅವನ ನಡವಳಿಕೆ ಉತ್ತಮಗೊಳ್ಳಲಿಲ್ಲ.